ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ. 294/2018,

ಚಾಸಾ-2, ಪ್ರಾಸಾ -2

| | |
|---|---|
| ಹೆಸರು | ಸರಸ್ವತಿ |
| ಗಂಡನ ಹೆಸರು | ಸದಾಶಿವ ಆಚಾರ್ಯ |
| ವಯಸ್ಸು | 40 ವರ್ಷ |
| ಕೆಲಸ | ಬೀಡಿ ಕಟ್ಟುವುದು ಮರುವಿಚಾರಣೆ ಇಲ್ಲ. |
| ವಾಸ | ಕಲ್ಲಬೆಟ್ಟು |
| ಪ್ರಮಾಣೀಕರಿಸಿದ ದಿನಾಂಕ | 07-08-2019 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ-1 ನನ್ನ ಗಂಡ . ಚಾಸಾ-3 ನನ್ನ ಅಣ್ಣ . ದಿಃ 05-09-2017 ರಂದು ನನ್ನ ಗಂಡ ಎಂದಿನಂತೆ ಅವರು ಕೆಲಸಕ್ಕೆ ಹೋದರು . ನಾನು ಸುಮಾರು ಸುಮಾರು 10-00 ಗಂಟೆಗೆ ಮನೆಗೆ ಬೀಗ ಹಾಕಿ ಬೀಡಿ ಬ್ರಾಂಚ್‌ಗೆ ಹೋಗಿದ್ದರು. ಆಗ ಮನೆಯಲ್ಲಿ ಯಾರು ಇರಲಿಲ್ಲ. ಸುಮಾರು 11-30 ಗಂಟೆಗೆ ಮನೆಗೆ ವಾಪಸ್ಸು ಬಂದು ಎಂದಿನಂತೆ ಮೀಟರ್ ಬಾಕ್ಸ್ ಬಳಿ ಇಟ್ಟ ಮನೆಯ ಬೀಗವನ್ನು ತೆಗೆದು ಮನೆಯ ಬಾಗಿಲನ್ನು ತೆರೆದು ನೋಡಲಾಗಿ, ಮನೆಯಲ್ಲಿ ಇದ್ದ ಕಪಾಟಿನೊಳಗೆ ಇದ್ದ ಚಿನ್ನದ ಹವಳದ ಸರ, ಚಿನ್ನದ ಮುತ್ತಿನ ಹಾರ ಮತ್ತು ಬಂಗಾರದ ಜೋಮಾಲೆ, ಬಂಗಾರದ ಮಗುವಿನ ಚೈನ್ ಹಾಗೂ ಎರಡು ಉಂಗುರುಗಳನ್ನು ತೆಗೆದುಕೊಂಡು ಹೋಗಿದ್ದರು. ಮನೆಯ ಕಪಾಟಿನ ಬಾಗಿಲನ್ನು ಮುರಿದು ಒಳಗೆ ಇದ್ದ ಮೇಲೆ ಹೇಳಿದ ಚಿನ್ನದ ಒಡವೆಗಳನ್ನು ತೆಗೆದುಕೊಂಡು ಹೋಗಿದ್ದರು. ಸದರಿ ವಿಷಯವನ್ನು ಅದೇ ದಿನ ನನ್ನ ಗಂಡನಿಗೆ ಹೇಳಲು ಹೆದರಿಕೆಯಾಯಿತು. ಏಕೆಂದರೆ ಅವರಿಗೆ ಹೃದಯ ಚಿಕಿತ್ಸೆಯಾಗಿತ್ತು. ಒಂದು ಮದುವೆಗೆ ಹೋಗುವಾಗ ನಿನ್ನ ಒಡವೆಗಳು ಎಲ್ಲಿ ಎಂದು ಕೇಳಿದಾಗ , ಅವುಗಳು ಯಾರೊ ಕದ್ದಿರುವುದಾಗಿ ಹೇಳಿದೆ . ನಂತರ ನನ್ನ ಗಂಡ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತಾರೆ. ಎರಡು ದಿನಗಳ ನಂತರ ಪೊಲೀಸರು ನನ್ನ ಗಂಡನಿಗೆ ಕರೆ ಮಾಡಿ ಕಳ್ಳ ಸಿಕ್ಕಿದ್ದಾನೆ , ಪೊಲೀಸ್ ಠಾಣೆಗೆ ಬನ್ನಿ ಎಂದು ಕರೆದರು . ನಾನು ನನ್ನ ಗಂಡನೊಂದಿಗೆ ಪೊಲೀಸ್ ಠಾಣೆಗೆ ಹೋದೆ. ನಮ್ಮ ಮನೆಯಲ್ಲಿ ಕಳುವಾದ ಚಿನ್ನವನ್ನು ತೋರಿಸಿದರು . ಅದು ನಮ್ಮದೇ ಚಿನ್ನವಾಗಿರುತ್ತದೆ. ಠಾಣೆಯಲ್ಲಿ ಆಗ ಆರೋಪಿ ಸಹ ಇದ್ದ. ಈ ದಿನ ನಾಯಾಲಯದ ಮುಂದೆ ಹಾಜರಿರುವ ಆರೋಪಿ ಆ ದಿನ ಪೊಲೀಸ್ ಠಾ ೆಯಲ್ಲಿ ಇರುವ ವ್ಯಕ್ತಿಯಾಗಿರುತ್ತಾನೆ. ನಿಪಿ-3 ರಲ್ಲಿ ಕಾಣುವ ಚಿನ್ನದ ಒಡವೆಗಳೇ ಆ ದಿನ ನಮ್ಮ ಮನೆಯುಲ್ಲಿ ಕಳ್ಳತನವಾದ ಚಿನ್ನದ ಒಡವೆಗಳಾಗಿರುತ್ತವೆ.

<u>ಪಾಟೀಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ವಕೀಲರಿಂದಃ</u>

ಕಳ್ಳತನವಾದ ವಿಷಯ ನನ್ನ ಅಣ್ಣನಿಗೆ ಒಂದೆರಡು ದಿನ ಬಿಟ್ಟು ತಿಳಿಸಿದ್ದೆ . ನನ್ನ ಅಣ್ಣ ಪೊಲೀಸರನ್ನು ಕರೆದುಕೊಂಡು ಬರಲಿಲ್ಲ. ದೂರು ಕೊಟ್ಟ ನಂತರ ಪೊಲೀಸರು ಬಂದರು. ಕಳ್ಳತನವಾದ ಮೇಲೆ ನನ್ನ ಅಣ್ಣ ಮನೆಗೆ ಬರಲಿಲ್ಲ. ಕಳ್ಳತನವಾದ ದಿನವೇ ನಾನು ಪೋಲಿಸರಿಗೆ ಕಳ್ಳತನವಾದ ವಿಷಯ ತಿಳಿಸಲಿಲ್ಲ. ದೂರನ್ನು ಕೊಡುವ ದಿನ ಪೊಲೀಸರು ಕಳ್ಳನ್ನನ್ನು ನನಗೆ ತೋರಿಸಲಿಲ್ಲ . ಸ್ವತ್ತುಗಳನ್ನು ದೂರನ್ನು ಕೊಟ್ಟ ದಿನವೇ ನಮಗೆ ಪೊಲೀಸರು ತೋರಿಸಲಿಲ್ಲ. ಪೊಲೀಸರು ಆರೋಪಿಯನ್ನು ಮತ್ತು ಸ್ವತ್ತುಗಳನ್ನು ತೋರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ.

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ